# ದೃಷ್ಟಿ ತಾಗಿತೆ ನಮ್ಮ ಕೃಷ್ಣರಾಯಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 288.
2. **Note:** This song is not available in other standard books that I referred.
3. **Note:** Singer has followed these lyrics.

ರಾಗ: ಧನ್ಯಾಸಿ ತಾಳ: ಆದಿ

ದೃಷ್ಟಿ ತಾಗಿತೆ ನಮ್ಮ ಕೃಷ್ಣರಾಯಗೆ || ಪ ||
ಸೃಷ್ಟಿಯಲಿ ನಾರಿಯರು ಕ-
ಣ್ಣಿಟ್ಟು ಹೀರುವರು ಕಾಣೆ || ಅಪ ||

ಬಿಟ್ಟ ಕಣ್ಣ ಮುಚ್ಚಲಿಲ್ಲ
ಮುಟ್ಟಗೊಡ ಬೆನ್ನ ಮುಳ್ಳ
ಇಷ್ಟು ಗಂಟಲೊಳು ಗುರು-
ಗುಟ್ಟಿ ಗುಟ್ಟಿತೇ ನಮ್ಮ || 1 ||

ತೆರೆದ ಬಾಯ ಮುಚ್ಚಲಿಲ್ಲ
ಕಿರಿದಾಯಿತು ತನುವಿದೆಲ್ಲ
ಭರದಿ ಪೆತ್ತ ತಾಯ ಕಂಡರೆ
ಸೇರಲೊಲ್ಲನೆ || 2 ||

ಅನ್ನವನ್ನು ಉಣಲಿಲ್ಲ
ಎನ್ನ ಮನೆ ಬೆಣ್ಣೆಯೆಲ್ಲ
ಚೆನ್ನ ವಸ್ತ್ರ ಹೊದಿಸಲು
ತಾನೊಲ್ಲನೆ || 3 ||

ರಾಜ ರಾಜರಲ್ಲಿ ತೇಜಿ
ಮಾಜಿ ರಥವ ನಡೆಸಿ

ಮಾಜಿ ವಾಜಿಯನ್ನು ಹತ್ತು
ಎಂದರೆ ಯಾಕೆ ಒಲ್ಲನೆ || 4 ||

ಅರಿತವರ್ಯಾರು ಮಂತ್ರ ತಂತ್ರ
ಕರೆದು ಭಸಿತ ಹಾಕಿರಮ್ಮ
ಧರೆಯೊಳು ಪುರಂದರ ವಿಠಲನ
ಸ್ಮರಣೆ ಮಾಡಿದರಿಂದ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮುಟ್ಟಗೊಡ** = ಮುಟ್ಟಲು ಬಿಡದಿರುವುದು

**ಭಸಿತ** = ಬೂದಿ

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, gopi, hengasu, kannu, bayi, deha, tayi, anna, benne, vastra, kudure, mantra, bhumi, smarane,
**Pravachana:** NA
**Explanation:** NA